ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **85/2024**

ಫಿರ್ಯಾದಿ ಸರಕಾರ (ಹಾವೇರಿ ಗ್ರಾಮೀಣ ಪೊಲೀಸ ಠಾಣೆ ).

ವಿರುದ್ಧ

ಆರೋಪಿ: **1.** ನಿರಂಜನ ಜಿ.ಎಂ ತಂದೆ ಜಯರಾಮ ಜಿ.ಡಿ
ವಯಾಃ **31** ವರ್ಷ, ಉದ್ಯೋಗಃ ಚಾಲಕ
ಸಾಃ ಗುಡ್ಡಕೊಪ್ಪಲು ತಾಃ ಅರಸೀಕೆರೆ ಜಿಃ ಹಾಸನ

ಆಪಾದನೆ

ದಿಃ30.10.2023 ರಂದು ಬೆಳಗಿನ 02-45 ರ ಸುಮಾರಿಗೆ ಆರೋಪಿಯಾದ ನೀನು ಹಾವೇರಿ ಗ್ರಾಮೀಣ ಪೊಲೀಸ ಠಾಣೆ ಸರಹದ್ದಿನ ಬರುವಂತ ಎನ್.ಹೆಚ್-48 ರಸ್ತೆಯ ಮೇಲೆ ಹುಬ್ಬಳ್ಳಿ ಕಡೆಗೆ ಹೋಗುವರಸ ್ತೆಯ ಮೇಲೆ ದೇವಗಿರಿ ಬ್ರಿಡ್ಜ ಸಮೀಪ ಪಿರ್ಯಾದಿಯು ತಮ್ಮ ಮನೆಯ ಜನರು ಹಾಗೂ ಸಂಬಂಧಿಕರನ್ನು ಕರೆದುಕೊಂಡು ಮೈಲಾರ ದೇವಸ್ಥಾನಕ್ಕೆ ಹೋಗಿ ಮರಳಿ ಊರಿಗೆ ಎನ್.ಎಚ್-48 ರಸ್ತೆಯ ಮೇಲೆ ಟ್ರ್ಯಾಕ್ಟರ ನಂಬರಃ ಕೆಎ-27/ಟಿಸಿ-8025 ಟ್ರೇರ ನಂಬರಃ ಕೆಎ-27/ಟಿಸಿ -8074 ರಲ್ಲಿ ಹೊರಟಾಗ 1 ನೇ ಆರೋಪಿಯಾದ ನೀನು ನಿನಗೆ ವಾಹನ ನಡೆಸಲು ಪರವಾನಿಗೆ ಪತ್ರವಿಲ್ಲದೇ ಮಿನಿ ಬಸ ನಂಬಃ ಕೆಎ-51/ಡಿ-2626 ನೇದ್ದನ್ನು ಬೆಳಂಗೂರು ಕಡೆಯಿಂದ ಹುಬ್ಬಳಿಗೆ ಹೋಗಲು ಅತೀ ಜೋರಾಗಿ ಮತ್ತು ನಿರ್ಲಕ್ಷತನದಿಂದ ಮಾನವೀಯ ಪಾಣಕ್ಕೆ ಅಪಾಯವಾಗಮ ರೀತಿಯಲ್ಲಿ ನಡೆಸಿಕೊಂಡು ಬಂದು ಅದನ್ನು ನಿಯಂತ್ರಣ ಮಾಡದೇ ತನ್ನ ಮುಂದೆ ಹೊರಟ ಟ್ರ್ಯಾಕ್ಟರ ಟ್ರೇಲರಿನ ಹಿಂದಿನ ಭಾಗಕ್ಕೆ ಡಿಕ್ಕಿ ಮಾಡಿ ಅಪಘಾತಪಡಿಸಿ ಟ್ರ್ಯಾಕ್ಟರ ಮತ್ತು ಟ್ರೇಲರಿನ ಹಿಂದಿನ ಭಾಗಕ್ಕೆ ಡಿಕ್ಕಿ ಮಾಡಿ ಅಪಘಾತಪಡಿಸಿ ಟ್ರ್ಯಾಕ್ಟರ ಮತ್ತು ಟ್ರೇಲರ ಎಡಹೊಳು ಮಗ್ಗಲಾಗಿ ಪಲ್ಟಿಯಾಗುಂವತೆ ಮಾಡಿ ಈ ಕೇಸಿನ ಗಾಯಾಳು ಚಾ.ಸಾ-7,9,10 ರಿಂದ 28 ರವರೆಗೆ ಮೈಕೈಗೆ, ತಲೆಗೆ, ಸಾದಾಮತ್ತು ಬಾರೀ ಗಾಯಪಟ್ಟು ಪಡಿಸಿದ್ದಲ್ಲದೇ ಇತರೇ ಅಲ್ಪವಯಿಸ್ಸಿನ ಮಕ್ಕಳಾದ ಸೀಮಾ ಉಜ್ಜಪ್ಪ ಲಮಾಣಿ, ಪ್ರೇಮಾ ಲಕ್ಷ್ಮಣ ಲಮಾಣಿ ಸಂಗೀತಾ ಶೇಖಪ್ಪ ಲಮಾಣಿ, ದಿಶಾತಂದೆ ಪ್ರಕಾಶ ಲಮಾಣಿ ಇವರಿಗೂ ಸಹ ಸಾದಾ ಮತ್ತು ಬಾರೀ ಗಾಯಪೆಟ್ಟು ಪಡಿಸಿದ್ದಲ್ಲದೇ ಟ್ರ್ಯಾಕ್ಟರ ಟ್ರೇಲರನಲ್ಲಿದ್ದ ಚಾ.ಸಾ-18 ಇವರ ಮರಣನಾದ ಚಿಂತನ ತಂದೆ ಪ್ರಕಾಶ ಲಮಾಣಿ ಇವರ ತಲೆಗೆ ಬಾರೀ ಗಾಯಪಡಿಸಿ ಸ್ಥಳದಲ್ಲಿಯೇ

ಮರಣ ಹೊಂದುವಂತೆ ಮಾಡಿದ್ದಲ್ಲದೇ ಅಪಘಾತ ಸುದ್ದಿಯನ್ನು ಠಾಣೆಗೆ ತಿಳಿಸದೇ ವಾಹನವನ್ನು ಬಿಟ್ಟು ಓಡಿ ಹೋಗಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂಃ **279,337, 338, 304**(ಎ) ಮತ್ತು ಕಲಂ**.3** ರೆ/ವಿ **181, 134**(ಎ), (ಬಿ) ಸಹಕಲಂ **187** ಎಂ**.**ವಿ ಆ್ಯಕ್ಟ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಈ ಮೇಲ್ಕಂಡ ಆಪಾದನೆ ವಿಚಾರಣೆಗೊಳಪಡಿಸಲು ನಿರ್ದೇಶಿಸಿದ್ದೇನೆ.

ದಿನಾಂಕಃ **05.06.2026**
ಸ್ಥಳಃ ಹಾವೇರಿ

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಸಿಸಿ ನಂಬರ್ **85/2024**</u>

<u>ದಿನಾಂಕಃ **05.06.2026**</u>

<u>ಫಿರ್ಯಾದಿ</u> ಸರಕಾರ (ಹಾವೇರಿ ಗ್ರಾಮೀಣ ಪೊಲೀಸ ಠಾಣೆ).

ವಿರುದ್ಧ

<u>ಆರೋಪಿ</u> **1.** ನಿರಂಜನ ಜಿ.ಎಂ ತಂದೆ ಜಯರಾಮ ಜಿ.ಡಿ
ವಯಾಃ **31** ವರ್ಷ, ಉದ್ಯೋಗಃ ಚಾಲಕ
ಸಾಃ ಗುಡ್ಡಕೊಪ್ಪಲು ತಾಃ ಅರಸೀಕೆರೆ ಜಿಃ ಹಾಸನ

1. ಈ ಮೇಲೆ ಹೇಳಿದ ಆಪಾದನೆಯು ನಿನಗೆ ಅರ್ಥವಾಗಿದೆಯೇ?
ಉತ್ತರಃ

2. ಈ ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?
ಉತ್ತರಃ

*(ಈ ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

ದಿನಾಂಕಃ ***05.06.2026***
ಸ್ಥಳಃ ಹಾವೇರಿ

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.